# ಸುಲಭ ನಿರ್ವಹಣೆಗೆ ಸ್ನೇಕ್ ಪ್ಲಾಂಟ್



**ಒಂದಕ್ಕಿಂತ ಒಂದು ಸುಂದರ ತಳಿಗಳಿರುವ ಸಾನ್ಸಿವೇರಿಯಾ, ‘ಸ್ನೇಕ್ ಪ್ಲಾಂಟ್’ ಎಂದೇ ಪ್ರಸಿದ್ಧ. ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಗಟ್ಟಿಯಾಗಿ ನಿಲ್ಲಬಲ್ಲ ಪ್ರಬಲ ಸಸ್ಯ.**

■ ಸೀಮಾ ಹೆಗಡೆ

ಇದೊಂದು ಆಲಂಕಾರಿಕ ಸಸ್ಯ. ಪಟ್ಟೆ ಪಟ್ಟೆ ಹಾವು ಹೆಡೆ ಎತ್ತಿ ನಿಂತಂತೆ ಕಾಣುವ ಈ ಸಸ್ಯ ಕಚೇರಿ, ಮನೆ, ಉದ್ಯಾನವನ, ಬೀದಿ ಬದಿ ಬೇಲಿಯಲ್ಲೂ ಕಾಣಸಿಗುತ್ತದೆ. ಯಾವುದಿರಬಹುದೆಂದು ಊಹಿಸಬಲ್ಲಿರಾ? ಹೌದು! ಇದೇ ಸ್ನೇಕ್ ಪ್ಲಾಂಟ್; ಗಾರ್ಡನ್ನಿಗರಷ್ಟೇ ಅಲ್ಲದೆ ಸಾಮಾನ್ಯ ಜನರಿಗೂ ಚಿರಪರಿಚಿತ ‘ಸಾನ್ಸಿವೇರಿಯಾ’.

ನೈಜೀರಿಯಾದಿಂದ ಕಾಂಗೊವರೆಗಿನ ಭೌಗೋಳಿಕ ಪ್ರದೇಶದಲ್ಲಿ ಹುಟ್ಟಿದ ಸಾನ್ಸಿವೇರಿಯಾ ಪಶ್ಚಿಮ ಆಫ್ರಿಕಾದ ಸೆಲೆಬ್ರಿಟಿ ಸಸ್ಯ. ಆಫ್ರಿಕನ್ನರ ನಂಬಿಕೆಯ ಪ್ರಕಾರ ಸಾನ್ಸಿವೇರಿಯಾ ದುಷ್ಟಶಕ್ತಿಗಳನ್ನು ದೂರವಿಡಬಲ್ಲ ಅದೃಷ್ಟದಾಯಕ ಸಸ್ಯ! ಪರಿಣಾಮ, ಆಫ್ರಿಕನ್ನರ ವಿವಿಧ ಸಾಂಪ್ರದಾಯಿಕ ಆಚರಣೆಯ ಭಾಗವಾಗಿ, ಔಷಧಿಯಾಗಿ ಸಾನ್ಸಿವೇರಿಯಾ ಬಳಕೆಯಲ್ಲಿದೆ. ಸಾನ್ಸಿವೇರಿಯಾದ ನಾರು ಬಹುಗಟ್ಟಿ ಮತ್ತು ಬಹುಬಾಳಿಕೆ ಬರುವಂಥದ್ದು. ಹಾಗಾಗಿ ಇದರ ನಾರನ್ನು ಬಟ್ಟೆ ನೇಯ್ಗೆಯಲ್ಲಿ ಹಗ್ಗ ಹೆಣೆಯಲು ಇಂದಿಗೂ ಉಪಯೋಗಿಸಲಾಗುತ್ತದೆ.

ಆಫ್ರಿಕನ್ನರು ಹಿಂದೊಂದು ಕಾಲದಲ್ಲಿ ಈ ನಾರನ್ನು ಬಿಲ್ಲಿನ ತಯಾರಿಕೆಗೆ ಬಳಸಲಾಗುತ್ತಿದ್ದ ಕಾರಣ ಸಾನ್ಸಿವೇರಿಯಾವನ್ನು ‘ವೈಪರ್ಸ್ ಬೋಸ್ಟ್ರಿಂಗ್ ಹೆಂಪ್’ ಎಂದು ಕರೆಯುತ್ತಿದ್ದರಂತೆ (ವೈಪರ್ ಎಂದರೆ ಒಂದು ಜಾತಿಯ ಹಾವು, ಹೆಂಪ್ ಎಂದರೆ ಒಂದು ರೀತಿಯ ನಾರು). ಶುಷ್ಕ ಪರಿಸ್ಥಿತಿಗಳಲ್ಲಿ ಬದುಕಬಲ್ಲ ಸಾಮರ್ಥ್ಯವಿರುವ ಸಾನ್ಸಿವೇರಿಯಾ ಮಣ್ಣಿನ ಸವಕಳಿ ತಡೆಯುವ ಮೂಲಕ ಸಣ್ಣ ಕೀಟಗಳಿಗೆ ಆವಾಸಸ್ಥಾನವನ್ನು ಒದಗಿಸುವ ಮೂಲಕ ಆಫ್ರಿಕನ್ ನೆಲದಲ್ಲಿ ಜೀವವೈವಿಧ್ಯವನ್ನೂ ಬೆಂಬಲಿಸುತ್ತದೆ.

ಸಸ್ಯಪ್ರಿಯ ಪಾಶ್ಚಾತ್ಯರು ಸಾನ್ಸಿವೇರಿಯಾದ ಚೂಪುತುದಿಯ ಎಲೆಗಳನ್ನು ಅತ್ತೆಯ ಹರಿತ ನಾಲಿಗೆಗೆ ಹೋಲಿಸಿ ತಮಾಷೆಗಾಗಿ ‘‘ಮದರ್ ಇನ್ ಲಾ’ಸ್ ಟಂಗ್’’ ಸಸ್ಯ ಎಂದು ಕರೆದಿದ್ದಾರೆ. ಆಫ್ರಿಕನ್ನರಂತೆ ಗೌರವ ಭಾವನೆಗಳನ್ನು ಬೆಳೆಸಿಕೊಂಡಿರುವ ಬ್ರೆಜಿಲಿಯನ್ನರು ಸಾನ್ಸಿವೇರಿಯಾವನ್ನು ಅವರ ಸಮುದಾಯದ ವೀರಯೋಧ ‘ಸೇಂಟ್ ಜಾರ್ಜ್’ನ ಕತ್ತಿಗೆ ಹೋಲಿಸಿದ್ದಾರೆ. ಇವೆಲ್ಲಾ ಹೆಸರುಗಳ ಜೊತೆ ಪ್ರಸ್ತುತ ‘ಡ್ರೆಸಿನಾ ಟ್ರೈಫೆಸಿಯಾಟಾ’ ಎಂದು ಮರುವರ್ಗೀಕರಣ ಮಾಡಲಾಗಿದೆಯಾದರೂ ಸಾನ್ಸಿವೇರಿಯಾ ಎಂಬ ಹಳೆಯ ಹೆಸರೇ ಜನಪ್ರಿಯ.



ಸಾನ್ಸಿವೇರಿಯಾಗಳ ಇನ್ನೊಂದು ವಿಶೇಷತೆ ‘CAM’ ದ್ಯುತಿಸಂಶ್ಲೇಷಣೆ ಕ್ರಿಯೆ. ಈ ಕ್ರಿಯೆಯಲ್ಲಿ ಸಸ್ಯ ಹಗಲಿಡೀ ತನ್ನ ಪತ್ರರಂಧ್ರಗಳನ್ನು ಮುಚ್ಚಿಟ್ಟು ರಾತ್ರಿ ಸಮಯಕ್ಕೆ ತೆರೆದಿಡುತ್ತದೆ. ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಇಂಗಾಲದ ಡೈ ಆಕ್ಸೈಡ್ ಅನ್ನು ರಾತ್ರಿ ಹೊತ್ತು ಒಳಗೆಳೆದು ಸಂಗ್ರಹಿಸಿಟ್ಟುಕೊಂಡು ಹಗಲಲ್ಲಿ ಬಳಕೆ ಮಾಡುತ್ತದೆ. ರಾತ್ರಿ ಹೊತ್ತು ತಂಪಾಗಿರುವ ಕಾರಣ ಪತ್ರರಂಧ್ರಗಳ ಮೂಲಕ ನೀರು ಆವಿಯಾಗಿ ವ್ಯರ್ಥವಾಗುವುದೂ ತಪ್ಪುತ್ತದೆ. ಬರ ಸಹಿಷ್ಣುತೆಗೆ ವಿಕಸನವಾದ ಈ ಗುಣ ಸಾನ್ಸಿವೇರಿಯಾವನ್ನು ಅತ್ಯುತ್ತಮ ಒಳಾಂಗಣ ಸಸ್ಯವನ್ನಾಗಿಸಿದೆ. ಒಳಾಂಗಣದ ವಾತಾವರಣದಲ್ಲಿರುವ ಕಲುಷಿತ ರಾಸಾಯನಿಕಗಳನ್ನೂ ಹೀರಿಕೊಳ್ಳಬಲ್ಲ ಸಾನ್ಸಿವೇರಿಯಾ ‘ಏರ್ ಪ್ಯೂರಿಫೈಯಿಂಗ್ ಪ್ಲಾಂಟ್’ ಎಂದು ವೈಜ್ಞಾನಿಕವಾಗಿ ದೃಢಪಡಿಸಲಾಗಿದೆ.

ಮಬ್ಬು ಬೆಳಕಿನಲ್ಲೂ ತಮ್ಮ ಅಂದವನ್ನು ಕಾಪಿಟ್ಟುಕೊಳ್ಳಬಲ್ಲ ಸಾನ್ಸಿವೇರಿಯಾಗಳ ನಿರ್ವಹಣೆ ತುಂಬಾ ಸುಲಭ. ಮನೆಯೊಡೆಯನ ನಿರ್ಲಕ್ಷ್ಯವನ್ನೂ ನಿಭಾಯಿಸಬಲ್ಲ ಸಸ್ಯವಿದು. ಕಡಿಮೆ ಬೆಳಕನ್ನು ಸಹಿಸಿಕೊಳ್ಳಬಲ್ಲವಾದರೂ ಪ್ರಕಾಶಮಾನ ಬೆಳಕಿನಲ್ಲಿ ಚುರುಕಾದ, ಸೊಂಪಾದ ಬೆಳವಣಿಗೆ ಸಹಜ. ಸಕ್ಯುಲೆಂಟ್ ಸಸ್ಯಗಳಂತೆ ಶರೀರದಲ್ಲಿಯೇ ನೀರನ್ನು ಸಂಗ್ರಹಿಸಿಟ್ಟುಕೊಳ್ಳಬಲ್ಲ ಕಾರಣ ಇವುಗಳ ನೀರಿನ ಬೇಡಿಕೆಯೂ ಕಡಿಮೆ; ಒಳಾಂಗಣದ ಒಣಹವೆಯಲ್ಲೂ ತಿಂಗಳಿಗೊಮ್ಮೆ ನೀರು ಸಾಕೆಂದರೆ ಆಶ್ಚರ್ಯವಾಗುತ್ತದೆ. ಸಾನ್ಸಿವೇರಿಯಾಗಳಲ್ಲಿ ಒಂದಕ್ಕಿಂತ ಒಂದು ಚಂದದ ತಳಿಗಳೂ ಇವೆ. ಇವುಗಳನ್ನು ಬೇರು ಕಾಂಡಗಳನ್ನು ವಿಭಜಿಸುವ ಮೂಲಕ ಅಥವಾ ಕೇವಲ ಎಲೆಯ ಭಾಗದಿಂದ ಸಸ್ಯಾಭಿವೃದ್ಧಿ ಮಾಡಬಹುದು; ನಿಮ್ಮ ಸುತ್ತಮುತ್ತಲಿರುವ ತಳಿ ಸಂಗ್ರಹ ಮಾಡಲೂಬಹುದು.

ಪ್ರತಿಕ್ರಿಯಿಸಿ: feedback@sudha.co.in